ಹಾಪ್‌ಕಾಮ್ಸ್ ಸೊಸೈಟಿ

725 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಹಾಪ್‌ಕಾಮ್ಸ್ ಸೊಸೈಟಿಗಳಿವೆ? (ಶಾಖೆಗಳು ಎಷ್ಟು, ವಿವರ ನೀಡುವುದು)

ಆ) ಹಾರ್ಟಿಕಲ್ಚರ್ ಸೊಸೈಟಿ ಪ್ರಾರಂಭವಾದಾಗಲಿನಿಂದ 1997-98ನೇ ಸಾಲಿನವರೆಗೆ ಆದ ಲಾಭ ಮತ್ತು ನಷ್ಟ ಎಷ್ಟು?

ಇ) ಮಾರುಕಟ್ಟೆಯಲ್ಲಿ ರೈತರು ಬೆಳೆದ ಬೆಳೆಗೆ ಬೆಲೆ ಸಿಗದೆ ಇದ್ದಾಗ ಹಾಪ್‌ಕಾಮ್ಸ್ ಯಾವ ರೀತಿ ಸಹಾಯ ಮಾಡಿದೆ (ಖರೀದಿ ಮಾಡಿದ ವಿವರ ನೀಡುವುದು)

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣಾ ಸಂಘ (ನಿ) ಬೆಂಗಳೂರು (ಹಾಪ್‌ಕಾಮ್ಸ್) ಇದು ರಾಜ್ಯದ 9 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಅವುಗಳೆಂದರೆ ಬೆಂಗಳೂರು ನಗರ ಬೆಂಗಳೂರು ಗ್ರಾಮಾಂತರ ತುಮಕೂರು ಕೋಲಾರ ಮಂಡ್ಯ, ಹಾಸನ ಮೈಸೂರು ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು. ಈ ಸಂಘವು ಒಟ್ಟು 7 ಶಾಖಾ ಕಛೇರಿಗಳನ್ನು ಹೊಂದಿದ್ದು ಅವುಗಳೆಂದರೆ ತುಮಕೂರು ಕೋಲಾರ ಮಂಡ್ಯ ಮೈಸೂರು, ಹಾಸನ, ಮಂಗಳೂರು ಹಾಗೂ ಚಿಕ್ಕಮಗಳೂರು.

ಆ) ಸಂಘದ ಲೆಕ್ಕ ಪತ್ರಗಳನ್ನು 1991-92ನೇ ಸಾಲುಗಳವರೆಗೆ ಮಾತ್ರ ಲೆಕ್ಕ ಪರಿಶೋಧನೆಯಾಗಿದ್ದು, ತದನಂತರದ ಅವಧಿಯ ಲೆಕ್ಕ ಪರಿಶೋದನಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಸಂಘವು ಗಳಿಸಿದ ಲಾಭ ನಷ್ಟದ ವಿವರ ಈ ಕೆಳಕಂಡಂತಿರುತ್ತದೆ.

ಲೆಕ್ಕಪರಿಶೋಧನಾ ವರದಿಯಂತೆ - 1991-92ನೇ ಸಾಲಿನವರೆಗೆ ಲಾಭ 26.19 ಲಕ್ಷ

ತಾತ್ಕಾಲಿಕ ವರದಿಯಂತೆ :

1992-93	1.18 ಲಕ್ಷ
1993-94	23.27 ”
1994-95	17.80 ”
1995-96	29.41 ”
1996-97	9.95 ”

೧) ಮಾರುಕಟ್ಟೆಯಲ್ಲಿ ರೈತರು ಬೆಳೆದ ಆಲೂಗಡ್ಡೆ ಹಾಗೂ ಈರುಳ್ಳಿಗೆ ಬೆಲೆ ಸಿಗದೆ ಇದ್ದಾಗ ಸಂಘವು ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಲ್ಲಿ 1996-97ನೇ ಸಾಲಿನಲ್ಲಿ ಆಲೂಗಡ್ಡೆಯನ್ನು ಮತ್ತು ಈರುಳ್ಳಿಯನ್ನು ಖರೀದಿಸಿದೆ. 1997-98ನೇ ಸಾಲಿನಲ್ಲಿ ಆಲೂಗಡ್ಡೆಯನ್ನು ಖರೀದಿಸಿದ್ದು, ವಿವರಗಳು ಈ ಕೆಳಕಂಡಂತಿದೆ.

	ಆಲೂಗಡ್ಡೆ		ಈರುಳ್ಳಿ	
ವರ್ಷ	ಪರಿಮಾಣ ಟನ್‌ಗಳಲ್ಲಿ	ಖರೀದಿ ಮೊತ್ತ ರೂ. ಲಕ್ಷಗಳಲ್ಲಿ	ಪರಿಮಾಣ ಟನ್‌ಗಳಲ್ಲಿ	ಖರೀದಿ ಮೊತ್ತ ಲಕ್ಷ ರೂಗಳಲ್ಲಿ
1996-97	3391	146.87	436	14.63
1997-98	2991	104.00	-	-

ಹಿರೇಕೆರೂರಿನಿಂದ ಕಮಲಾಪುರಕ್ಕೆ ಸಂಚರಿಸುವ ಬಸ್ ಟ್ರಿಪ್ ರದ್ದುಗೊಳಿಸಿರುವುದು

728 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರಿನಿಂದ ಪ್ರತಿ ದಿನ ಮಧ್ಯಾಹ್ನ ಕಮಲಾಪುರಕ್ಕೆ ಸಂಚರಿಸುವ ಬಸ್, ದಿನಾಂಕ 1-1-98 ರಿಂದ 31-3-98ರವರೆಗೆ ಎಷ್ಟು ಟ್ರಿಪ್‌ಗಳನ್ನು ರದ್ದು ಮಾಡಲಾಗಿದೆ?

ಆ) ರದ್ದು ಮಾಡದೆ ಈ ಮಾರ್ಗದಲ್ಲಿ ಬಸ್ ಸಂಚರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್ ಸಿಂಧ್ಯ (ಸಾರಿಗೆ ಸಚಿವರು) :

ಅ) ಜನವರಿ 1998 ರಿಂದ ಮಾರ್ಚ್ 1998ರವರೆಗೆ ಈ ಮಾರ್ಗದಲ್ಲಿ 66 ಟ್ರಿಪ್‌ಗಳನ್ನು ರದ್ದು ಗೊಳಿಸಲಾಗಿದೆ.

ಆ) ರದ್ದು ಮಾಡದೆ ಸದರಿ ಅನುಸೂಚಿಯನ್ನು ಕಾರ್ಯಾಚರಣೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

INTER STATE BUSES FROM BASAVAKALYANA

729 - Sri Basavaraja Patil Attur (Basavakalyana) : Will be Hon. Transport Minister be pleased to state?

a) What action has been taken by the Govt. to operate inter state buses from Basavakalyan to Sholapur Latur and Mumbai in Maharashtra and to Srishylam and Tirupati in Andhra Pradesh?